**CC 1143/2017**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ**
**ನ್ಯಾಯಾಲಯ, ಹೊಸಪೇಟೆ.**
**ಸಿಸಿ ನಂಬರ್ 1143/2017**

**ಸಿ ಡಬ್ಲೂ 24**
**ಪಿ ಡಬ್ಲೂಃ 8**

**ಸಾಕ್ಷಿಯ ಹೆಸರು - ಬಿ. ರಾಘವೇಂದ್ರ**
**ತಂದೆಯ ಹೆಸರು - ಬಿ. ಮೂರ್ತೆಪ್ಪ**
**ವಯಸ್ಸು - 48 ವರ್ಷಗಳು**
**ಉದ್ಯೋಗ - ಮುಖ್ಯ ಪೇದೆ, ಪಟ್ಟಣ ಪೋ. ಠಾ.**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 01-08-2025 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು **2015** ರಿಂದ **2019** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಪೇದೆ ಆಗಿ ಮತ್ತು ನಂತರದಲ್ಲಿ ಇಲ್ಲಿಯವರೆಗೆ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ **20-02-2017** ರಂದು ನಾನು ಠಾಣೆಯಲ್ಲಿದ್ದಾಗ ಚಾಸಾ **-22** ರವರು ಪ್ರಕರಣದ ಆರೋಪಿತರನ್ನು ಮತ್ತು ಮಾಲನ್ನು ಪತೆತ ಮಾಡಬೇಕು ಎಂದು ನನಗೆ, ಚಾಸಾ **-23, 25** ರಿಂದ **29** ರವರಿಗೆ ತಿಳಿಸಿದ್ದರು. ನಾವುಗಳು ಸರ್ಕಾರಿ ವಾಹನ ಕೆಎ**-35-**ಜಿ**-542** ವಾಹನದಲ್ಲಿ ಬೆಳಿಗ್ಗೆ **10.00** ಗಂಟೆಗೆ ಗಸ್ತು ತಿರುಗಲು ಹೋದೆವು. ಬೆಳಿಗ್ಗೆ **11.00** ಗಂಟೆಗೆ ಬಳ್ಳಾರಿ ರಸ್ತೆಯ ಹೆಚ್ ಎಲ್ ಸಿ ಕಾಲುವೆ ಹತ್ತಿರ ಇಬ್ಬರು ಆಸಾಮಿಗಳು ಅನುಮಾನಾಸ್ಪದವಾಗಿ ಓಡಾಡುತ್ತಿದ್ದರು, ಅವರು ನಮ್ಮನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದರು. ನಾನು ಮತ್ತು ಚಾಸಾ **-25** ರವರು ಒಬ್ಬ ಆರೋಪಿಯನ್ನು ಹಿಡಿದುಕೊಂಡು ಬಂದು ಚಾಸಾ **-22** ರವರ ಮುಂದೆ ಹಾಜರುಪಡಿಸಿದೆವು.

ಇನ್ನೊಬ್ಬ ಆರೋಪಿ ತಪ್ಪಿಸಿಕೊಂಡು ಹೋಗಿದ್ದ. ಹಿಡಿದುಕೊಂಡು ಬಂದ ಆರೋಪಿ ತನ್ನ ಹೆಸರು ಮಹಮ್ಮದ್ ರಫೀಕ್, ಸಾಃ ಹಡಗಲಿ, ಹಾಲಿ ವಾಸಃ ಸಿರಸನಕಲ್ಲು ಹೊಸಪೇಟೆ ಎಂದು ತಿಳಿಸಿರುತ್ತಾನೆ. ಚಾಸಾ -22 ರವರು ಸದರಿ ವ್ಯಕ್ತಿಯನ್ನು ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಿದಾಗ ಆರೋಪಿ ತನ್ನ ಸ್ನೇಹಿತ ಮಹಮ್ಮದ್ ಯಾಸೀನ್ ಮತ್ತು ತಾನು ತಮ್ಮೊಂದಿಗೆ ವ್ಯಾಜ್ಯ ಇರುವ ಸುಗುಣಾ ಎಂಬುವವರ ರಾಧಾಕೃಷ್ಣ ಆಟೋ ಮೊಬೈಲ್ಸ್ ನಲ್ಲಿರುವ ಸಾಮಾನುಗಳನ್ನು ಕಳ್ಳತನ ಮಾಡಲು ಮಾತನಾಡಿಕೊಂಡು ನಂತರ ತಾನು ಅಂದರೆ ಮಹಮ್ಮದ್ ರಫೀಕ್ ಟಾಟಾ ಏ ಸ್ ಸಂಖ್ಯೆಃ ಕೆಎ-35-ಎ-8170 ವಾಹನವನ್ನು ಸದರಿ ಆಟೋ ಮೊಬೈಲ್ಸ್ ಬಳಿ ದಿಃ 16-02-2017 ರಂದು ಬೆಳಿಗ್ಗೆ 11.00 ಗಂಟೆಗೆ ತೆಗೆದುಕೊಂಡು ಹೋಗಿದ್ದಾಗಿ ತಿಳಿಸಿದ. ನಂತರ ಸದರಿ ಆಟೋ ಮೊಬೈಲ್ಸ್ ನ ಬಾಗಿಲು ಹೊಡೆದು ಒಳಗೆ ಹೋಗಿ ಅಲ್ಲಿದ್ದ ಸಾಮಾನುಗಳನ್ನು ಆರೋಪಿ ಮಹಮ್ಮದ್ ರಫೀಕ್, ಆತನ ಸ್ನೇಹಿತ ಯಾಸೀನ್, ಮಂಜುನಾಥ ಮತ್ತು ಇಮಾಮ್ ರವರು ಟಾಟಾ ಏ ಸ್ ನಲ್ಲಿ ತುಂಬಿಕೊಂಡು ಹೋಗಿರುವುದಾಗಿ ತಿಳಿಸಿದ. ಸದರಿ ಆರೋಪಿತರು ಮಹಮ್ಮದ್ ರಫೀಕ್ ನನ್ನು ಆಟೋ ಮೊಬೈಲ್ಸ್ ನ ಹತ್ತಿರ ಬಿಟ್ಟು ಸಾಮಾನುಗಳನ್ನು ತೆಗೆದುಕೊಂಡು ಹೋಗಿ ಅವುಗಳನ್ನು ಖಾಲಿ ಮಾಡಿ ಪುನಃ ಖಾಲಿ ವಾಹನವನ್ನು ತೆಗೆದುಕೊಂಡು ಬಂದಿದ್ದರು ಎಂದು ತಿಳಿಸಿದ. ಆರೋಪಿತರು ಸುಗುಣಾರವರ ಮನೆಯಲ್ಲಿದ್ದ ಗೃಹ ಬಳಕೆ ವಸ್ತುಗಳಾದ ಪ್ರಿಜ್, ಅಲಮೇರಾ ಮತ್ತು ಏರ್ ಕೂಲರ್ ಗಳನ್ನು ಟಾಟಾ ಏಸ್ ನಲ್ಲಿ ತೆಗೆದುಕೊಂಡು ಹೋಗಿ ಮಂಜುನಾಥನ ಮನೆಯಲ್ಲಿ ಬಚ್ಚಿಟ್ಟಿರುವುದಾಗಿ ತಿಳಿಸಿದ. ಸದರಿ ಟಾಟಾ ಏಸ್ ನ್ನು ಮೇರಾ ಪೈಸಾ ಮೇರಾ ವಾಹನ ಎಂಬ ಅಂಗಡಿಯಲ್ಲಿ ಮಾರಾಟಕ್ಕೆ ಇಟ್ಟಿರುವುದಾಗಿ ತಿಳಿಸಿದ.

**CC 1143/2017**

**ಸಿ ಡಬ್ಲ್ಯೂ 24**

**ಪಿ ಡಬ್ಲ್ಯೂಃ 8**

ಆರೋಪಿ ಮಹಮ್ಮದ್ ರಫೀಕ್ ಆತನ ಹಿಂದೆ ನಾವುಗಳು ಹೋದರೆ ವಾಹನವನ್ನು ಮತ್ತು ಗೃಹೋಪಯೋಗಿ ವಸ್ತುಗಳನ್ನು ಬಚ್ಚಿಟ್ಟಿದ್ದ ಮಂಜುನಾಥನ ಮನೆಯನ್ನು ತೋರಿಸುವುದಾಗಿ ತಿಳಿಸಿದ. ನಾವುಗಳು ಠಾಣೆಯಿಂದ ಹೊರಟು ಅಪನಾ ಪೈಸಾ ಅಪನಾ ವಾಹನ ಅಂಗಡಿಗೆ ಹೋಗಿ ಸದರಿ ಟಾಟಾ ಏಸ್ ವಾಹನವನ್ನು ಜಪ್ತು ಪಡಿಸಿಕೊಂಡಿರುತ್ತೇವೆ.

ಸಾಕ್ಷಿ 2- ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಗುರುತಿಸುವಿಕೆಗಾಗಿ ಒಟ್ಟಾಗಿ ನಿಪಿಃ 27 ಎಂದು ಗುರುತಿಸಲಾಯಿತು.

ನಂತರ ಅಲ್ಲಿಂದ ಜೆ ಪಿ ನಗರದಲ್ಲಿದ್ದ ಮಂಜುನಾಥರವರ ವಾಸದ ಮನೆಗೆ ಹೋಗಿ ಅಲಮೇರಾ, ಪ್ರಿಜ್ ಮತ್ತು ಏರ್ ಕೂಲರ್ ನ್ನು ಜಪ್ತು ಪಡಿಸಿಕೊಳ್ಳಲಾಯಿತು. ಸಾಕ್ಷಿ ನಿಪಿಃ 7 ಮತ್ತು 8 ರ ಫೋಟೋ ನೋಡಿ ಗುರುತಿಸಿರುತ್ತಾರೆ. ನಂತರ ನಾವುಗಳು ಠಾಣೆಗೆ ಹಿಂತಿರುಗಿರುತ್ತೇವೆ. ಸದರಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸಿಕ್ಕಿ ಬಿದ್ದ ಆರೋಪಿಯನ್ನು ಗುರುತಿಸುವುದಾಗಿ ತಿಳಿಸಿ, ಈ ದಿನ ಅವರು ಗೈರು ಹಾಜರು ಇರುತ್ತಾರೆ ಎಂದು ನುಡಿದಿರುತ್ತಾರೆ. ಸಾಕ್ಷಿ ಓಡಿ ಹೋಗಿದ್ದ ಆರೋಪಿ ಎಂದು ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ ಜಿ ಪಿ ಆರ್., ವಕೀಲರಿಂದ**

ನಾನು ಪ್ರಥಮ ವರ್ತಮಾನ ವರದಿಯನ್ನು ನೋಡಿರುವುದಿಲ್ಲ. ನಾನು 1 ನೇ ಆರೋಪಿಯನ್ನು ಮೊದಲು ನೋಡಿರುತ್ತೇನೆ. ಸಾಕ್ಷಿ ಸ್ವತಃ ಮುಂದುವರೆದು ಅವರ ಅಂಗಡಿಯೊಂದು ಇರುತ್ತದೆ ಆದ್ದರಿಂದ ಪರಿಚಯ ಎಂದು ನುಡಿಯುತ್ತಾರೆ. ಸದರಿಯವರ ಅಂಗಡಿ ಮಲ್ಲಿಗೆ ಹೋಟೆಲ್ ಎದುರುಗಡೆ ಇರುತ್ತದೆ ಅಂದರೆ ಸರಿ.

ಅವರು ಎಷ್ಟು ವರ್ಷಗಳಿಂದ ಅಲ್ಲಿ ಅಂಗಡಿ ಇಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾವು ಗಸ್ತು ತಿರುಗಲು ಹೋಗಿದ್ದ ಹೆಚ್ ಎಲ್ ಸಿ ಕಾಲುವೆ ಜಂಬುನಾಥ ರಸ್ತೆಯಲ್ಲಿ ಇರುತ್ತದೆ. ನಾವುಗಳು 1 ನೇ ಆರೋಪಿಯ ಅಂಗಡಿಯ ಹತ್ತಿರ ಮತ್ತು ಅದರ ಹಿಂದಿನ ಕಾಲುವೆ ಹತ್ತಿರ ಹೋಗಿಲ್ಲ ಅಂದರೆ ಸರಿ. ನಾವು 6 ಜನ ಗಸ್ತು ತಿರುಗಲು ಹೋಗಿದ್ದೇವು. ನಾವುಗಳು ದ್ವಿ ಚಕ್ರ ವಾಹನಗಳು ಮತ್ತು ಜೀಪ್ ನಲ್ಲಿ ಹೋಗಿದ್ದೇವು. ಮಹಮ್ಮದ್ ರಫೀಕ್ ರವರನ್ನು ನಾನು ಮತ್ತು ಚಾಸಾ -25 ರವರು ಹಿಡಿದಿರುತ್ತೇವೆ. ನನ್ನ ಹೇಳಿಕೆಯಲ್ಲಿ ಆ ರೀತಿ ನಮೂದಿಸುವಂತೆ ತನಿಖಾಧಿಕಾರಿಗೆ ತಿಳಿಸಿರುತ್ತೇನೆ. ಓಡಿ ಹೋದ ಆರೋಪಿ ಜಂಬುನಾಥ ರಸ್ತೆ ಕಡೆಗೆ ಹೋಗಿದ್ದರು. ನಾವು ವಾಹನಗಳು ಇದ್ದರೂ ಆತನನ್ನು ಹಿಡಿಯಲು ಆಗಿರಲಿಲ್ಲ. 1 ನೇ ಆರೋಪಿ ಒಂದು ಬೈಕ್ ನಲ್ಲಿ ಸ್ಥಳದಿಂದ ಪರಾರಿಯಾದ. ಸದರಿ ಬೈಕ್ ಯಾವ ಕಂಪನಿಯದ್ದು, ಅದರ ಬಣ್ಣ ಏನಿತ್ತು, ಅದರ ನೋಂದಣಿ ಸಂಖ್ಯೆ ಏನಿತ್ತು ಎಂದು ನನಗೆ ಗೊತ್ತಿಲ್ಲ. ನಾವುಗಳು ಗಸ್ತು ತಿರುಗಲು ಹೋದಾಗ ಇಬ್ಬರು ಆರೋಪಿತರು ಹೆಚ್ ಎಲ್ ಸಿ ಕಾಲುವೆ ಹತ್ತಿರ ಅನುಮಾನಾಸ್ಪದವಾಗಿ ಓಡಾಡುತ್ತಿದ್ದರು ಮತ್ತು ನಮ್ಮನ್ನು ನೋಡಿ ಓಡಿ ಹೋದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮಹಮ್ಮದ್ ರಫೀಕ್ ಎಂಬ ಆರೋಪಿ ಠಾಣೆಗೆ ಬಂದು ಚಾಸಾ -1 ರವರ ಆಟೋ ಮೊಬೈಲ್ಸ್ ನಲ್ಲ್ ಇದ್ದ ಸಾಮಾನುಗಳನ್ನು ಮತ್ತು ಅವರ ಮನೆಯಲ್ಲಿದ್ದ ಗೃಹೋಪಯೋಗಿ ಫ್ರಿಜ್, ಅಲಮೇರಾ ಮತ್ತು ಏರ್ ಕೂಲರ್ ನ್ನು ಟಾಟಾ ಏಸ್ ನಲ್ಲಿ ತೆಗೆದುಕೊಂಡು ಹೋಗಿದ್ದಾಗಿ ತಿಳಿಸಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**CC 1143/2017**

**ಸಿ ಡಬ್ಲೂ 24**

**ಪಿ ಡಬ್ಲೂ: 8**

ತನ್ನ ಹಿಂದೆ ಹೋದರೆ ಅವುಗಳನ್ನು ಇಟ್ಟಿದ್ದ ಸ್ಥಳಗಳನ್ನು ತೋರಿಸುವುದಾಗಿ ತಿಳಿಸಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ಆರೋಪಿ ಬೈಕ್ ನಲ್ಲಿ ಸ್ಥಳದಿಂದ ಓಡಿ ಹೋಗಿದ್ದ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರಿಜ್, ಅಲಮೇರಾ ಮತ್ತು ಏರ್ ಕೂಲರ್ ಗಳು ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿಯೂ ಇರುತ್ತವೆ ಅಂದರೆ ಸರಿ. ನಿಪಿಃ 7, 8 ಮತ್ತು 27 ರ ಪೋಟೋಗಳನ್ನು ಪ್ರಕರಣಕ್ಕಾಗಿ ಸೃಷ್ಟಿಸಿರುತ್ತೇವೆ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆ- ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹೊಸಪೇಟೆ.